<u>ದಿನಾಂಕ : ***21-03-2025*** ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>**ಪಾಟೀ ಸವಾಲು : *4* ನೇ ಎದುರುದಾರರ ಪರವಾಗಿ ಶ್ರೀ. ಆರ್.ಪಿ.ಕೆ ವಕೀಲರಿಂದ**</u>

ನನ್ನ ಹೆಂಡತಿಯು ಅಪಘಾತವಾದ ದಿನ ರಾಶಿ ಕೆಲಸಕ್ಕೆ ಅಂದರೆ ತೆನೆ ಮುರಿಯಲು ಹೋಗಿದ್ದಳು. ಚಕ್ಕಡಿಯಲ್ಲಿ ಆ ದಿನ 9 ಜನರು ಇದ್ದರು. ಚಕ್ಕಡಿಯಲ್ಲಿ ಆ ದಿನ ತೆನೆಯನ್ನು ತೆಗೆದುಕೊಂಡು ಬಂದಿರಲಿಲ್ಲ. ಚಕ್ಕಡಿಯು ಹುನಗುಂದ ರಸ್ತೆಯಿಂದ ಬಾಗಲಕೋಟ ರಸ್ತೆಯ ಕಡೆಗೆ ಬರುತ್ತಿತ್ತು. ಅಪಘಾತವು ನಮ್ಮ ಊರಿನ ಹತ್ತಿರ ಆಗಿರುತ್ತದೆ. ಚಕ್ಕಡಿಯ ರಸ್ತೆಯ ಎಡಗಡೆ ಬರುತ್ತಿದ್ದು ನಮ್ಮ ಊರಿಗೆ ಬರಬೇಕಾದರೆ ರಸ್ತೆ ದಾಟಿಕೊಂಡು ಬಲಭಾಗದಲ್ಲಿ ಬರಬೇಕಾಗುತ್ತದೆ ಎಂದರೆ ಸರಿ. ಚಕ್ಕಡಿ ಚಾಲಕನು ಒಮ್ಮಿಂದೊಮ್ಮೆಲೆ ಚಕ್ಕಡಿಯನ್ನು ತಿರುಗಿಸಿದ್ದರಿಂದ ಸದರಿ ಅಪಘಾತವು ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ಲಾರಿ ಚಾಲಕನ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ಹನಮಂತ ಹೂಗಾರ ಎನ್ನುವವರು ಕೊಟ್ಟಿರುತ್ತಾರೆ. ನಾನು ಅಪಘಾತದ ಜಾಗೆಗೆ ಹೋಗಿರುವುದಿಲ್ಲ. ದೂರನ್ನು ಹನಮಂತ ಗೌಡರ ವಿರುದ್ದ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಮಗೆ ಲಾರಿ ಮತ್ತು ಲಾರಿಯ ಚಾಲಕ ಗೊತ್ತಿರುವುದಿಲ್ಲ ಮತ್ತು ಅವರ ಮೇಲೆ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಏನಾದರೂ ಮಾಡಿ ಪರಿಹಾರದ ಹಣವನ್ನು ಪಡೆಯಬೇಕೆಂದು ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಎದರುದಾರರಿಗೆ ಡಿ ಎಲ್ ಇರುವುದಿಲ್ಲ ಎಂದರೆ ಸರಿಯಲ್ಲ. ಲಾರಿಗೆ ಪರಿಮಿಟ್ ಇರುವುದಿಲ್ಲ ಮತ್ತು 1 ನೇ ಎದರುದಾರರಿಗೆ ಡಿ ಎಲ್ ಇರದೇ ಇರುವುದರಿಂದ 4 ನೇ ಎದರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು 2 ವರ್ಷ 6 ತಿಂಗಳು ವಿಳಂಬವಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು ತಡವಾಗಿ ಸಲ್ಲಿಸಿದ್ದರಿಂದ ಪರಿಹಾರದ ಹಣವನ್ನು ಪಡೆಯಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ 42 ವರ್ಷ ಇತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಹೆಂಡತಿಗೆ ಅಪಘಾತವಾದಾಗ 55 ರಿಂದ 60 ವರ್ಷ ಇತ್ತು ಎಂದರೆ ಸರಿಯಲ್ಲ. ನನ್ನ ಹೆಂಡತಿ ತಿಂಗಳಿಗೆ 16 ಸಾವಿರ ರೂ. ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಹೊಲಮನೆ ಕೆಲಸ ಎಂದರೆ ಕೆಲಸ ಇದ್ದಾಗ ಹೋಗುತ್ತಾರೆ ಮತ್ತು ಕೆಲಸ ಇಲ್ಲದೇ ಇದ್ದಾಗ ಮನೆಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿದಾರರು ದಿನಾಲೂ ಕೂಲಿ ಕೆಲಸ ಇರುವುದರಿಂದ ಕೆಲಸಕ್ಕೆ ಹೋಗುತ್ತಾರೆ ಎಂದು ಹೇಳುತ್ತಾರೆ. 2 ಮತ್ತು 3 ನೇ ಅರ್ಜಿದಾರರು ಕೂಲಿ ಕೆಲಸಕ್ಕೆ ಹೋಗುತ್ತಾರೆ ಮತ್ತು 4 ಮತ್ತು 5 ನೇ

ಅರ್ಜಿದಾರರಿಗೆ ಮದುವೆ ಆಗಿ ಅವರ ಗಂಡನ ಮನೆಯಲ್ಲಿ ಇರುತ್ತಾರೆ. ಹೀಗಾಗಿ 2 ರಿಂದ 5 ನೇ ಅರ್ಜಿದಾರರು ಅವಲಂಬಿತರಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಶವ ಸಂಸ್ಕಾರಕ್ಕೊಸ್ಕರ 50 ಸಾವಿರ ರೂ. ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಎದರುದಾರರು ವಾಹನಕ್ಕೆ ಪರಿಮಿಟ್ ಇಲ್ಲದೇ ಇರುವುದರಿಂದ 4 ನೇ ಎದರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಕೊಡಲು 2 ನೇ ಎದರುದಾರರೇ ಭಾದ್ಯಸ್ತರು ಎಂದರೆ ಸಾಕ್ಷಿದಾರರು ಇಬ್ಬರು ಭಾದ್ಯಸ್ತರು ಎಂದು ಹೇಳುತ್ತಾರೆ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.

HANAMANTARAO R KULKARNI

Digitally signed by HANAMANTARAO R KULKARNI
Date: 2025.03.22 10:58:42 +0530